ಶ್ರೀ ಅಬ್ದುಲ್ ಖುದ್ದೂಸ್ ಅನ್ಸರ್.—ಸ್ವಾಮಿ, ಶಿವಮೊಗ್ಗ ಜಿಲ್ಲೆಯಲ್ಲಿ ಆಡ್ಮಿನಿಸ್ಟ್ರೇಷನ್ ಬಾಡಿ ಮಾಡುತ್ತೇವೆಂದು ಹೇಳಿದ್ದಿರಿ ಇದುವರೆಗೂ ಆಗಿಲ್ಲ ಅದನ್ನು ಯಾವಾಗ ಮಾಡುತ್ತೀರಾ?

ಶ್ರೀ ಹೆಚ್.ಎಂ. ಚನ್ನಬಸಪ್ಪ.—ನನಗೆ ಆದರ ಬಗ್ಗೆ ಅನೇಕ ಕಡೆಗಳಿಂದ ದೂರುಗಳು ಬಂದಿವೆ, ಈಗ 3 ಜನರು ಒಂದು ಕಮಿಟಿ ಮಾಡಿ ಅದಕ್ಕೆ ಕಾಲಮಿತಿ ಕೊಟ್ಟು, ಆದಷ್ಟು ಜಾಗ್ರತೆ ಪೂರೈಸಬೇಕೆಂದು ಹೇಳಿದ್ದೇನೆ.

Property tax on sites and buildings

291. SRI B. V. KAKKILAYA (Bantwal).—[On behalf of SRI M. S. KRISHNAN (Malleswarm)].—Will the Minister for Municipal Administration and Political Pensions be pleased to state.—

(*a*) whether Government intend to collect property tax on the basis of market value of site and buildings constructed, if so whether this move has been implemented:

(*b*) whether representations have been received by the citizens of Bangalore, their elected representatives etc., in this regard;

(*c*) if so whether the Government has given up the said proposal?

SRI D. K. NAIKAR (Minister for Municipal Administration and Political Pensions).—

(*a*) Yes, but not implemented.

(*b*) Yes.

(*c*) No. It would, however, be ensured that the increase in the rates would not be substantial and that no undue hardship would be caused to the rate payers.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ತಾವು (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಹೌದು ಆದರೆ ಅದನ್ನು ಜಾರಿಗೊಳಿಸಿಲ್ಲ ಎಂದು ಹೇಳಿದ್ದೀರಿ, ಆದರೆ ಇದು ಏನು ಎಂಬುದು ನಮಗೆ ಸರಿಯಾಗಿ ಅರ್ಥವಾಗುತ್ತಿಲ್ಲ. ಆದುದರಿಂದ ಇದನ್ನು ಸ್ಪಷ್ಟವಾಗಿ ಹೇಳುತ್ತೀರಾ?

†ಶ್ರೀ ಡಿ.ಕೆ. ನಾಯ್ಕರ್.—ನನ್ನ (ಎ) ಉತ್ತರದಲ್ಲಿ "Yes: but not implemented" ಎಂದು ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿರುವ "Whether Government intend to collect property tax on the basis of market value of site and buildings constructed; if so whether this move has been implemented: ಎಂದು ಅದಕ್ಕೆ ಮಾನ್ಯ ಮಂತ್ರಿಗಳು 'Yes; but not implemented" ಎಂದು ಉತ್ತರ ಕೊಟ್ಟಿದ್ದಾರೆ. ಆದರೂ ಮಾನ್ಯ ಸದಸ್ಯರಿಗೆ ಏತಕ್ಕೆ ಇದರಲ್ಲಿ ಸಂಶಯ?

ಶ್ರೀ ಬಿ.ವಿ ಕಕ್ಕಿಲಾಯ.—ಕಾನೂನು ಜಾರಿಯಲ್ಲದೆ, ಆದರೆ ಆದರ ಪ್ರಕಾರ ತಾವು ಕಾಯ್ದೆ ಕ್ರಮ ತೆಗೆದುಕೊಂಡಿಲ್ಲ ಎಂದು ತಮ್ಮ ಉದ್ದೇಶವೆ?

ಶ್ರೀ ಡಿ.ಕೆ. ನಾಯ್ಕರ್.—ಈ ಕಾನೂನು 1ನೇ ಜೂನ್ 1977ರಿಂದ ಜಾರಿಗೆ ಬಂದಿದೆ. ಈ ಕಾನೂನು ಕೆಳಗೆ ರೂಲ್ಸ್ ಫ್ರೇಂ ಮಾಡಿದೆ. ಸಾರ್ವಜನಿಕರಿಂದ ಅಬ್ಜಕ್ಷನ್ ಕಾರ್ಫಾರ್ ಮಾಡಿದ್ದೇವೆ. ಅದಕ್ಕೆ ರಾಸ್ಟ್ ಡೇಟ್ ಜುಲೈ 10. ಅಷ್ಟರೊಳಗಾಗಿ ಸಾರ್ವಜನಿಕರು ಏನಾದರೂ ತಮ್ಮ ಅಬ್ಜಕ್ಷನ್ಸ್ ಇದ್ದರೆ ಅವನ್ನು ಫೈರ್ ಮಾಡಬಹುದು. ಅನಂತರ ಇದನ್ನು ವಿಚಾರ ಮಾಡಿ ಡಿಸ್‌ಪೋಸ್ ಮಾಡುತ್ತೇವೆ.

ಶ್ರೀ ಬಿ.ಏ ಕಕ್ಕರಾಯ.—ಈಗಾಗಲೇ ನಗರದಲ್ಲಿರುವಂಥ ಶಾಸಕರು, ಹಾಗೂ ಮತ್ತಿತರ ಸಾರ್ವಜನಿಕರೂ ಇದರಿಂದ ನಮಗೆ ಬಹಳ ತೊಂದರೆಯಾಗುತ್ತದೆಂದು ತಮ್ಮ ತಮ್ಮ ಮನವಿಗಳನ್ನು ಕೊಟ್ಟಿದ್ದಾರೆ. ತಾವು ಇದನ್ನು ವಿಚಾರಣೆ ನಡೆಸುವಾಗ ಸಾರ್ವಜನಿಕರನ್ನು ಕರೆಸಿ ವಿಚಾರಣೆ ಮಾಡುತ್ತೀರಾ? ಅವರನ್ನೂ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಡಿ.ಕೆ. ನಾಯ್ಕರ್.—ಈ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ಆಗಲೇ ಉತ್ತರ ಹೇಳಿದ್ದೇನೆ ನಾವು ಈಗ ಸಾರ್ವಜನಿಕರಿಂದ ಅಬ್ಜಕ್ಷನ್ಸ್ ಕಾರ್‌ಫಾರ್ ಮಾಡಿದ್ದೇವೆ, ಅಬ್ಜಕ್ಷನ್ಸ್ ಫೈರ್ ಮಾಡುವುದಕ್ಕೆ ಕೊನೇ ತಾರೀಖು ಜುಲೈ 10ರ ವರೆಗೆ ಇದೆ. ಅಷ್ಟರೊಳಗೆ ಯಾರ್ಯಾರು ತಮ್ಮ ತಮ್ಮ ಅಬ್ಜಕ್ಷನ್ಸ್ ಫೈಲ್ ಮಾಡುತ್ತಾರೆ ಅವುಗಳನ್ನೆಲ್ಲಾ ಸಂಪೂರ್ಣವಾಗಿ ಪರಿಶೀಲನೆ ಮಾಡುವಾಗ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಯಾವರೀತಿ ವಿಚಾರಣೆ ಮಾಡಬೇಕೋ ಆ ರೀತಿ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ.—ಈಗ ಹೊಸದಾಗಿ ಬಂದಿರತಕ್ಕ ಕಾಯಿದೆ ಪ್ರಕಾರ ಟ್ಯಾಕ್ಸ್ 15 ಪರ್ಸೆಂಟ್ ಇದ್ದುದು 20 ಪರ್ಸೆಂಟ್ ಆಗುತ್ತದೆ ಮತ್ತು ಸೆಸ್ ಎರ್ಡಾ ಸೇರಿ ಈಗ 18½ ಪರ್ಸೆಂಟ್ ಇರುವುದು 20 ಪರ್ಸೆಂಟ್ ಆಗುತ್ತದೆ. ಈ ಟ್ಯಾಕ್ಸ್ ಈಗಲೇ ಜಾಸ್ತಿ ಇರುವಾಗ ಇದನ್ನು ಇನ್ನೂ ಜಾಸ್ತಿ ಮಾಡುತ್ತೀರಾ?

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷೆಣಿಯವರೆ. ನಮ್ಮ ಮಾನ್ಯ ಶಾಮಣ್ಣನವರು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿದ್ದಾಗ ಇದನ್ನೆಲ್ಲಾ ಪರಿಶೀಲನೆ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಹೊಸ ಕಾನೂನಿನಲ್ಲಿ method of assessment ಹಾಕಿದ್ದೇವೆ. ಇದು ಬೆಂಗಳೂರು ಕಾರ್ಪೊರೇಷನ್ ಆಕ್ಟ್‌ನಲ್ಲಿ ಸೆಕ್ಷನ್ 100 ಏನಿದೆ ಅದನ್ನೇ ನಾವು ಅಡಾಪ್ಟ್ ಮಾಡಿಕೊಂಡು ಬಂದಿದ್ದೇವೆ.

Upgarding the Veterinary Dispensary at Thimmanahalli

336. SRI N. BASAVAIAH(Chikknayakanahalli).—Will the Minister of State for Animal Husbandry be pleased to state.—

(*a*) whether it is not a fact that a representation has been received by the Government requesting them to up grade the present Veterinary Dispensary into hospital at Thimmannahalli, Kanikere Hobli of Chikknayakanahalli Taluk:

(*b*) if so, the action taken by Government to accord sanction early?

SHRI B.G. Banakar (Minister of State for Animal Husbandary).—

(*a*) Yes.

(*b*) This will be considered during 1977-78 subject to availability of finance and depending on the merit of the case.